**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 11/2016
ಪಿಡಬ್ಲು : 5 ಸಿಡಬ್ಲು : 4

| | |
|---|---|
| ಸಾಕ್ಷಿಯ ಹೆಸರು | : ಶ್ರೀ.ದಿಲೀಪ ಅಸೋದೆ |
| ತಂದೆಯ ಹೆಸರು | : ಶ್ರೀ.ಶ್ಯಾಮರಾವ |
| ವಯಸ್ಸು | : 40 ವರ್ಷ |
| ಉದ್ಯೋಗ | : ಟೈಲರ |
| ವಾಸ್ತವ್ಯ | : ಮೊರಬ, ತಾಲೂಕುಃ ರಾಯಬಾಗ |
| ದಿನಾಂಕ | : 17-04-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಮೊರಬ ಗ್ರಾಮದಲ್ಲಿ ನಾನು ಟೈಲರಿಂಗ್ ಅಂಗಡಿಯನ್ನು ನಡೆಸುತ್ತೇನೆ. ನನ್ನ ಅಂಗಡಿ ದುರ್ಗಾದೇವಿ ಗುಡಿ ರಸ್ತೆಯಲ್ಲಿ ಇದೆ. ಚಾಸಾಃ 1 ಪ್ರಭಾಕರ, ಚಾಸಾಃ 5 ಚೆನ್ನಪ್ಪ, ಚಾಸಾಃ 6 ಫಿರೋಜ,ಚಾಸಾಃ 7 ಬೈರಪ್ಪ, ಚಾಸಾಃ 8 ದಿವಾಕರ ನನಗೆ ಪರಿಚಯ ಇರುತ್ತಾರೆ, ಅವರೆಲ್ಲರೂ ನಮ್ಮ ಊರಿನವರು. ನಾನು ಹಿಂದೂ ಧರ್ಮದ ಹೊಲೆಯರ ಜಾತಿಗೆ ಸೇರಿದ್ದೇನೆ.

2. ಆರೋಪಿತರು ನನಗೆ ಪರಿಚಯ ಇರುತ್ತಾರೆ, ಅವರೆಲ್ಲರೂ ನಮ್ಮ ಊರಿನವರು, ಅವರೆಲ್ಲರೂ ಲಿಂಗಾಯತ ಜಾತಿಗೆ ಸೇರಿದ್ದಾರೆ.

3. ದಿನಾಂಕಃ 01-10-2015 ರಂದು ರಾತ್ರಿ 10:30 ಸಮಯದಲ್ಲಿ ನಾನು, ಚಾಸಾಃ 1 ಪ್ರಭಾಕರ, ಚಾಸಾಃ 5 ಚೆನ್ನಪ್ಪ ಮೂರು ಜನರು ಮಲಗಿಕೊಂಡಿದ್ದೇವು. ಆ ದಿನ ರಾತಿರ 11:30 ರ ಸಮಯದಲ್ಲಿ ಪ್ರಭಾಕರ ಅವರ ಅಣ್ಣ ಪ್ರಭಾಕರನಿಗೆ ಪೋನ ಮಾಡಿ ಅಣ್ಣಪ್ಪ ಹರಿಜೋಳಿ ಮತ್ತು ಅವರ ಮನೆಯವರು ಆತನನ್ನು ವಿಚಾರಿಸಿಕೊಂಡು

ಬಂದಿದ್ದಾರೆ ಎಂದು ಹೇಳಿದರು. ಅಷ್ಟರಲ್ಲಿ ಆರೋಪಿತರು ನಮ್ಮ ಅಂಗಡಿಗೆ ಬಂದು ಬಾಗಿಲು ಬಡೆಯುತ್ತಿದ್ದರು. ಚೆನ್ನಪ್ಪ ಬಾಗಿಲನ್ನು ತೆಗೆದನು. ಆರೋಪಿತರು ಒಳಗೆ ನುಗ್ಗಿ ಪ್ರಭಾಕರ ಅವರಿಗೆ ಜಾತಿ ಹೆಸರು ಹಿಡಿದು ಅವಾಚ್ಯವಾಗಿ ಬೈಯುತ್ತಿದ್ದರು ಮತ್ತು ಆತನ ಕುತ್ತಿಗೆಯನ್ನು ಹಿಡಿದು ಹಿಸುಕುತ್ತಿದ್ದರು, ನಾನು ಮತ್ತು ಚಾಸಾಃ 5 ಚೆನ್ನಪ್ಪ ಬಿಡಿಸಲು ಹೋದಾಗ ಆರೋಪಿತರು ನಮಗೂ ಸಹ ಕೈಯಿಂದ ಹೊಡೆದಿರುತ್ತಾರೆ. ಆ ಸಮಯದಲ್ಲಿ ದಾರಿಯಲ್ಲಿ ಹೋಗುತ್ತಿದ್ದ ಚಾಸಾಃ 6 ಫಿರೋಜ ಚೌಗಲಾ ಮತ್ತು ಚಾಸಾಃ 7 ಬೈರಪ್ಪ ಚೌಗಲಾ ನಮ್ಮನ್ನು ಬಿಡಿಸಿಕೊಂಡರು.

4. 1ನೇ ಆರೋಪಿ ಅಣ್ಣಪ್ಪ ಮತ್ತು 4ನೇ ಆರೋಪಿ ಸುರೇಶ ಇವರುಗಳು ಪ್ರಭಾಕರನ ಕುತ್ತಿಗೆಯನ್ನು ಹಿಸುಕಿದರು. ಆರೋಪಿತರು ನನಗೆ ಹೊಡೆದಿದ್ದರಿಂದ ನನಗೆ ಒಳಪೆಟ್ಟು ಆಗಿತ್ತು, ನಾನು ಸ್ಥಳೀಯ ವೈದ್ಯರ ಬಳಿ ತೋರಿಸಿಕೊಂಡು ಚಿಕಿತ್ಸೆ ಪಡೆದುಕೊಂಡಿದ್ದೇನೆ.

5. ಘಟನೆಯ ಬಗ್ಗೆ ಪ್ರಭಾಕರ ಪೋಲಿಸರಿಗೆ ದೂರು ನೀಡಿದ್ದಾರೆ. ನಾನು ಸ್ಥಳೀಯ ವೈದ್ಯರನ್ನು ಬಿಟ್ಟು ಬೇರೆ ವೈದ್ಯರ ಬಳಿ ಹೋಗಿ ಚಿಕಿತ್ಸೆಯನ್ನು ಪಡೆದಿರುವುದಿಲ್ಲ. ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

6. 6ನೇ ಆರೋಪಿ ಮತ್ತು 10 ನೇ ಆರೋಪಿತರನ್ನು ಹೊರತುಪಡಿಸಿ ಉಳಿದ ಆರೋಪಿತರನ್ನು ಸಾಕ್ಷಿ ಗುರುತಿಸಿದ್ದಾರೆ.

(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**).

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 02-10-2015 ರಂದು ಪೋಲಿಸ ಠಾಣೆಯಲ್ಲಿ ದೂರು ನೀಡಿದ ನಂತರ ನಾನು ಕುಡಚಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದಿದ್ದೇನೆ ಎಂದು ಸೂಚಿಸುವುದು ಸರಿ.

**ಪಾಟೀ ಸವಾಲುಃ  ಆರೋಪಿತರ ಪರ ವಕೀಲರಿಂದಃ**

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮಧ್ಯಾಹ್ನದ ಅವಧಿಗೆ ಪ್ರಕರಣವನ್ನು ಕಾಯ್ದಿರಿಸಲಾಯಿತು.

**ಸಾಕ್ಷಿಯನ್ನು ಪುನಃ  ಮಧ್ಯಾಹ್ನ  ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

ಎಲ್ಲಾ ಪ್ರತ್ಯಕ್ಷ ಸಾಕ್ಷಿದಾರರ ಪಾಟೀ ಸವಾಲನ್ನು ಒಟ್ಟಿಗೆ ಒಂದೇ ದಿನ ಮಾಡಲು ಅನುವು ಮಾಡಿಕೊಡಬೇಕು ಎಂದು ಆರೋಪಿ ಪರ ವಕೀಲರು ಮನವಿ ಮಾಡಿರುತ್ತಾರೆ. ಮನವಿಯನ್ನು ಪರಿಗಣಿಸಿ ಪಾಟೀ ಸವಾಲಿಗಾಗಿ  ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕ : 10-07-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ 1, 2, 5, 6 ಮತ್ತು 9 ನೇ ಆರೋಪಿತರ ಪರ**

**ಶ್ರೀ.ಆರ್.ಸಿ.ಪಿ ವಕೀಲರಿಂದಃ**

8. 1 ನೇ ಆರೋಪಿ ಮೂಲತಃ ಸವಸುದ್ದಿ ಗ್ರಾಮದವರಾಗಿದ್ದು ಅವರು ಈಗ ಮೊರಬದಲ್ಲಿ ವಾಸ ಇದ್ದಾರೆ ಎನ್ನುವುದು ಸರಿ. 1 ನೇ ಆರೋಪಿಯ ವ್ಯಾಪಾರ ಮಾಡಿಕೊಂಡು ಅನುಕೂಲಸ್ಥರಾಗಿದ್ದಾರೆ ಎನ್ನುವುದು ಸರಿ. ಚಾಸಾ-6 ಮತ್ತು 7 ರವರು ಸಹ ನಮ್ಮೂರಿನಲ್ಲಿ ದೊಡ್ಡ ಮನೆತನ ಇದೆ ಎನ್ನುವುದು ಸರಿ. ಚೌಗಲಾ ಕುಟುಂಬಸ್ಥರು ಗ್ರಾಮ ಪಂಚಾಯತಿ ಆಡಳಿತವನ್ನು ಹೊಂದಿದ್ದಾರೆ ಎನ್ನುವುದು ಸರಿಯಲ್ಲ. ಚಾಸಾ-6 ಮತ್ತು 7 ಅವರ ಕುಟುಂಬದವರು ಚಾಸಾ-3 ಮಹಾದೇವ ಅಸೊದೆ, ದೀವಾಕರ ಅಸೊದೆ ಎಲ್ಲರು ಗ್ರಾಮ ಪಂಚಾಯತಿ ಸದಸ್ಯರು ಎನ್ನುವುದು ಸರಿ. 7 ನೇ ಆರೋಪಿ ಗೀರಿಜಾ ಅವರು ಸಹ ಚುನಾವಣೆ ಸ್ವರ್ಧಿಸಿದ್ದರು ಎನ್ನುವುದು ಸರಿ.

9. 7 ನೇ ಆರೋಪಿ ಚುನಾವಣೆಯಲ್ಲಿ ಸ್ವರ್ಧಿಸಿದ್ದರಿಂದ ಚಾಸಾ-6 ಮತ್ತು 7 ರವರ ಕುಟುಂಬದವರು ಅವರ ಮೇಲೆ ಸಿಟ್ಟಾಗಿದ್ದರು ಎನ್ನುವುದು ಸರಿಯಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ಹೇಳಿರುವುದಿಲ್ಲ. ನಾನು ಚನ್ನಪ್ಪ ಮತ್ತು ಪ್ರಭಾಕರ ದೂರು ನೀಡಲು ಪೋಲಿಸ ಠಾಣೆಗೆ ಹೋಗಿದ್ದೇವು. ನಾವು ದೂರನ್ನು ಕಂಪ್ಯೂಟರ ಸೆಂಟರನಲ್ಲಿ ಟೈಪ ಮಾಡಿಸಿ ಕೊಟ್ಟಿದ್ದೇವೆ. ನಾವು ಪೋಲಿಸ ಠಾಣೆಗೆ ನಂತರ ಆಸ್ವತ್ರೆಗೆ ಹೋಗಿದ್ದೆವು. ಇಬ್ಬರು ಪೋಲಿಸರು ಆಸ್ವತ್ರೆಗೆ ನಮ್ಮೊದಿಗೆ ಬಂದಿದ್ದರು. ನಾವು ಆಸ್ವತ್ರೆಯಿಂದ ಪುನಃ ಪೋಲಿಸ ಠಾಣೆಗೆ ಹೋದಾಗ ರಾತ್ರಿ 8.00 ಗಂಟೆ ಆಗಿತ್ತು. ನಾವು ಕುಡಚಿ ಸರಕಾರಿ ಆಸ್ವತ್ರೆಗೆ ಹೋಗಿದ್ದೇವು.

10. ಪಾನ ಅಂಗಡಿ ಊರಿನ ಮಧ್ಯದಲ್ಲಿ ಇದೆ ಎನ್ನುವುದು ಸರಿ. ಅಂಗಡಿಯ ಅಕ್ಕ

ಪಕ್ಕದಲ್ಲಿ ಸಾಕಷ್ಟು ಜನರು ಓಡಾಡುತ್ತಿರುತ್ತಾರೆ ಎನ್ನುವುದಕ್ಕೆ ಸಾಕ್ಷಿ ಆಗ ಅಷ್ಟು ಇರಲಿಲ್ಲ ಎಂದು ಹೇಳುತ್ತಾರೆ. ನಮ್ಮ ಅಂಗಡಿಯ ಅಕ್ಕ ಪಕ್ಕದಲ್ಲಿ ಘಟನಾ ಸಮಯದಲ್ಲಿ ಹೆಚ್ಚು ಮನೆಗಳು ಇರಲಿಲ್ಲ ಈಗ ಆಗಿವೆ. ಚಾಸಾ–7 ಬೈರಪ್ಪ ಅವರ ಮನೆ ತೋಟದಲ್ಲಿ ಇವೆ ಎನ್ನುವುದು ಸರಿ ಮತ್ತು ಅಂಗಡಿಯಿಂದ ಸುಮಾರು 2 ಕೀಲೊ ಮೀಟರ ದೂರದಲ್ಲಿದೆ ಎನ್ನುವುದು ಸರಿ. ಚಾಸಾ–6 ಮತ್ತು 7 ರವರದು ಊರಿನಲ್ಲಿ ಬಸವೇಶ್ವರ ಕೋ ಆಪ್ ಸೊಸೈಟಿ ಇರುತ್ತದೆ. ಅವರು ಚೀಟಿ ವ್ಯವಹಾರ ಮಾಡುವುದಿಲ್ಲ.

11. ನಾನು ಚೌಗಲಾ ಕುಟುಂಬದೊಂದಿಗೆ ಆತ್ಮಿಯತೆಯಿಂದ ಇದ್ದೇನೆ ಎನ್ನುವುದು ಸರಿಯಲ್ಲ. ನಾನು ಮತ್ತು ಚಾಸಾ–1 ಪ್ರಭಾಕರ, ಚಾಸಾ–3 ಮಹಾದೇವ ಅಸೊದೆ, ಚಾಸಾ–8 ದೀವಾಕರ ಅಸೊದೆ ಅವರು ಸಂಬಂಧಿಕರು ಎನ್ನುವುದು ಸರಿ.

12. ಘಟನೆ ಸಮಯದಲ್ಲಿ ಅಕ್ಕ ಪಕ್ಕದ ಮನೆಯವರು 5–6 ಜನ ಸೇರಿದ್ದರು ಅಂದರೆ ಶ್ರವಣ ಕಾಂಬಳೆ, ತಾಯಪ್ಪ ಕಾಂಬಳೆ, ಫೀರೊಜ ಚೌಗಲಾ ಮತ್ತು ಬೈರಪ್ಪ ಚೌಗಲಾ ಇದ್ದರು. ಮೊದಲಿಗೆ ತಾಯಪ್ಪ ಕಾಂಬಳೆ ಮತ್ತು ಶ್ರವಣ ಕಾಂಬಳೆ ಬಂದರು 5 ನಿಮಿಷದ ನಂತರ ಫೀರೊಜ ಚೌಗಲಾ ಮತ್ತು ಬೈರಪ್ಪ ಚೌಗಲಾ ಬಂದರು. ನಾವು ಟೈಲರಿಂಗ ಅಂಗಡಿ ನಡೆಸುತ್ತಿದ್ದೆ ಎಂದು ತೋರಿಸಲು ನಾನು ಪೋಲಿಸರಿಗೆ ಲೈಸನ್ಸ ಕೊಟ್ಟಿದ್ದೇನೆ. ನಮ್ಮ ಅಂಗಡಿಗೆ ಶೇಟರ್ ಇದೆ. ಆರೋಪಿತರು ಬರುತ್ತಿದ್ದಾರೆ ಶೇಟರ್ ತೆಗಿಬೇಡಿ ನಮಗೆ ಯಾರು ಹೇಳಿರಲಿಲ್ಲ.

13. ಆರೋಪಿರತರು ಬಂದು ಬಾಗಿಲು ಬಡಿಯುತ್ತಿದ್ದರು ಎಂದು ಫೀರೊಜ ಚೌಗಲಾ ಮತ್ತು ಬೈರಪ್ಪ ಚೌಗಲಾ ಅವರು ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಯಲ್ಲ. ಆರೋಪಿತರು ಎಂದೂ ನಮ್ಮ ಅಂಗಡಿಗೆ ಬಂದಿರಲಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರ ಪ್ರಭಾಕರನ ಕುತ್ತಿಗೆ ಹಿಸುಕುತ್ತಿದ್ದರು ಎಂದು, ನನಗೂ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 1 ನೇ ಆರೋಪಿ ಹೊರಗಿನಿಂದ ನಮ್ಮೂರಿಗೆ ಬಂದು ವ್ಯಾಪಾರ ಮಾಡಿಕೊಂಡು ಆರ್ಥಿಕವಾಗಿ ಚೆನ್ನಾಗಿದ್ದರೆಂದು ಅವರ ಮೇಲಿನ

ಸಿಟ್ಟಿನಿಂದ ನಾನು ಚಾಸಾ-6 ಫೀರೊಜ ಚೌಗಲಾ ಮತ್ತು ಚಾಸಾ-7 ಬೈರಪ್ಪ ಚೌಗಲಾ ಅವರು ಸೇರಿಕೊಂಡು ಸುಳ್ಳು ದೂರನ್ನು ಕೊಟ್ಟಿದ್ದೇವೆ.

**ಪಾಟೀ ಸವಾಲುಃ 4, 8, 10 ಮತ್ತು 11 ನೇ ಆರೋಪಿತರ ಪರ**

**ಶ್ರೀ.ಯು.ಬಿ.ಜಿ ವಕೀಲರಿಂದಃ**

14. ನಾನು 10 ನೇ ತರಗತಿ ವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನಮ್ಮ ಅಂಗಡಿಯಿಂದ ಪ್ರಭಾಕರ ಅವರ ಅಂಗಡಿ ಸುಮಾರು 15 ಮೀಟರ ದೂರದಲ್ಲಿದೆ. ದುರ್ಗವ್ವನ ಗುಡಿಯ ಹತ್ತಿರ ಇದೆ. ಘಟನಾ ಸಮಯದಲ್ಲಿ ನನಗೆ ಮದುವೆ ಆಗಿರಲಿಲ್ಲ. ತಂದೆ ತಾಯಿ ಮಾತ್ರ ಇದ್ದರು. ನಾನು, ಪ್ರಭಾಕರ ಮತ್ತು ಚನ್ನಪ್ಪ 3 ಜನರಿಗೆ ಮದುವೆ ಆಗಿರಲಿಲ್ಲ ನಾವು ಸ್ನೇಹಿತರಾಗಿದ್ದು ಸುಮಾರು 4-5 ವರ್ಷಗಳಿಂದ ನಮ್ಮ ಅಂಗಡಿಯಲ್ಲೆ ಮಲಗಿಕೊಳ್ಳುತ್ತಿದ್ದೇವು.

15. ಘಟನೆ ನಡದ ದಿನ ಸಂಜೆ 6.00 ಗಂಟೆಗೆ ಪ್ರಭಾಕರ ಅವರು ನನ್ನನ್ನು ಭೇಟಿ ಮಾಡಿದರು. ಆ ಸಮಯದಲ್ಲಿ ಆತನ ಅಂಗಡಿಯನ್ನು ಮುಚ್ಚಿ ನಮ್ಮ ಅಂಗಡಿಗೆ ಬಂದಿದ್ದನು. ಆ ದಿನ ರಾತ್ರಿ ಗಲಾಟೆ ಆದ ನಂತರ ಪ್ರಭಾಕರ ಮನೆಗೆ ಹೋಗಿರುತ್ತಾನೆ. ಅಲ್ಲಿಯವರೆಗೆ ಆತನು ನಮ್ಮ ಅಂಗಡಿಯಲ್ಲಿಯೇ ಇದ್ದನು. ಪ್ರಭಾಕರ ಸಂಜೆ 6.00 ಗಂಟೆಗೆ ನನ್ನನ್ನು ಭೇಟಿ ಮಾಡಿ ಮನೆಗೆ ಹೋಗಿ ಊಟ ಮಾಡಿ ರಾತ್ರಿ ಪುನಃ ಅಂಗಡಿಗೆ ಬಂದನು. 6.00 ಗಂಟೆಯಿಂದ 9.00 ಗಂಟೆ ಮಧ್ಯದಲ್ಲಿ ಪ್ರಭಾಕರ ನನ್ನೊಂದಿಗೆ ಯಾವುದೆ ಪ್ರಸ್ತಾಪ ಮಾಡಿರುವುದಿಲ್ಲ. 9.00 ಗಂಟೆಯ ನಂತರ ನಾವು ಅಂಗಡಿಯಲ್ಲಿ ಮಾತನಾಡುತ್ತಾ ಕುಳಿತಿದ್ದೇವು. ಆ ಸಮಯದಲ್ಲಿ ಪ್ರಭಾಕರ ರವರು ಬೆಳಿಗ್ಗೆ ನಡೆದ ಘಟನೆ ಹೇಳಿದರು. ನಾವು ಪೋಲಿಸರಿಗೆ ತಿಳಿಸುವ ಬಗ್ಗೆ ಮಾತನಾಡಿಕೊಳ್ಳಲಿಲ್ಲ. ರಾತ್ರಿ 9.00 ಗಂಟೆ ನಂತರವು ಸಹ ನಾವು ಊರಿನ ಮುಖಂಡರಿಗೆ ತಿಳಿಸಲಿಲ್ಲ. ಆ ದಿನ ನಾವು ರಾತ್ರಿ 10-10.30 ಗಂಟೆಗೆ ಮಲಗಿದೆವು. ಪ್ರಭಾಕರ ಅವರ ಅಣ್ಣ ರಾತ್ರಿ ಸುಮಾರು 12.00 ಗಂಟೆಗೆ ಪೋನ ಮಾಡಿದ್ದರು. ಆ ಸಮಯದಲ್ಲಿ ನನಗೆ ನಿದ್ದೆ ಹತ್ತಿತ್ತು. ಪ್ರಭಾಕರ

ಅವರ ಮನೆಗೂ ನಮ್ಮ ಅಂಗಡಿಗೂ ಸುಮಾರು 30–40 ಮೀಟರ ದೂರ ಇದೆ. ಪ್ರಭಾಕರ ಅವರ ಅಣ್ಣ ಫೋನ ಮಾಡಿ ಅಣ್ಣಪ್ಪ ಹಳಿಜೋಳಿ ಅವರು ಕೇಳಿಕೊಂಡು ಬಂದಿದ್ದಾರೆ ಹಷಾರಾಗಿರಿ ಎಂದು ಫೋನಿನಲ್ಲಿ ಹೇಳಿದರು. ಆ ಸಮಯದಲ್ಲಿ ಆರೋಪಿತರು ನಮಗೆ ಏನಾದರು ಮಾಡುತ್ತಾರೆ ಎಂದು ಭಯ ಆಯಿತು. ಕೂಡಲೇ ನಾನು ಪೋಲಿಸರಿಗೆ ಫೋನ ಮಾಡಿರುವುದಿಲ್ಲ. ನಾವು ಶೇಟರಗೆ ಬೀಗ ಹಾಕಿರಲಿಲ್ಲ ಹಾಗೆ ಕೆಳಗೆ ಮಾಡಿದ್ದೇವು. ಆರೋಪಿತರು ಬಂದು ಶೇಟರ ಬಡಿಯುತ್ತಿದ್ದಾಗ ನಾವು ಶೇಟರ ತೆಗೆಯುವುದು ಬೇಡ ಎಂದು ಯೋಚಿಸಲಿಲ್ಲ.

16. ಘಟನೆಯ ಪೂರ್ವದಲ್ಲಿ ನಮಗೂ ಆರೋಪಿತರಿಗೂ ಯಾವುದೆ ತಕರಾರು ಇರಲಿಲ್ಲ. ಆರೋಪಿತರು ರಾತ್ರಿ ಬಂದ ಕೂಡಲೇ ಯಾವ ಕಾರಣಕ್ಕೆ ಬಂದಿದ್ದೀರಿ ಎಂದು ನಾವು ವಿಚಾರಿಸಿರುವುದಿಲ್ಲ. ಆರೋಪಿತರು ಅಂಗಡಿಯೊಳಗೆ ಬಂದ ನಂತರ ನಾವು ಪೋಲಿಸರಿಗೆ ತಿಳಿಸೋಣ ಎಂದು ವಿಚಾರ ಮಾಡಿರುವುದಿಲ್ಲ. ಘಟನೆ ಸುಮಾರು 5 – 10 ನಿಮಿಷ ನಡೆದಿರುತ್ತದೆ. ಕೃತ್ಯ ನಡೆದ 2 ನಿಮಿಷದ ನಂತರ ಚಾಸಾ–6 ಮತ್ತು 7 ಬಂದರು. ಫಿರೋಜ ಮತ್ತು ಬೈರಪ್ಪ ಅವರಿಗೆ ಘಟನಯ ಬಗ್ಗೆ ಪ್ರಭಾಕರ ಹೇಳಿದರು. ಚಾಸಾ–6 ಮತ್ತು 7 ರವರು ನೀವು ಮನೆಗೆ ಹೋಗಿ ಮುಂಜಾನೆ ವಿಚಾರ ಮಾಡೋಣ ಎಂದು ಹೇಳಿದರು. ಘಟನೆ ಆದ ನಂತರ ಬೇಳಿಗ್ಗೆ 9.00 ಗಂಟೆಗೆ ನಾವು ಆಸ್ಪತ್ರೆಗೆ ಹೋಗಿದ್ದೇವು. ವೈದ್ಯರು ಹೆಸರು ಈಗ ಹೇಳಲು ಆಗುವುದಿಲ್ಲ. ಪ್ರಭಾಕರ ಮತ್ತು ಚನ್ನಪ್ಪ ಆಸ್ಪತ್ರಗೆ ಹೋದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಬೇಳಿಗ್ಗೆ ಫಿರೋಜ ಮತ್ತು ಬೈರಪ್ಪ ಅವರು ನಮ್ಮನ್ನ ಭೇಟ್ಟಿ ಮಾಡಿರುವುದಿಲ್ಲ. ನಾನು ಪ್ರಭಾಕರ ಮತ್ತು ಚನ್ನಪ್ಪ ಅವರು ಚಾಸಾ–6 ಮತ್ತು ಚಾಸಾ–7 ರವರು ಭೇಟಿ ಮಾಡುವ ಬಗ್ಗೆ ಯೋಚಿಸಿದ್ದೇವು. ಚಾಸಾ–6 ಮತ್ತು 7 ರವರಿಗೆ ಪೋಲಿಸ ಠಾಣೆಗೆ ಹೋಗಿ ದೂರು ನೀಡಲು ಕರೆದಿರುವುದಿಲ್ಲ. ದೂರು ನೀಡುವ ಮೊದಲು ಚಾಸಾ–6 ಮತ್ತು 7 ರವರೊಂದಿಗೆ ಚರ್ಚೆ ಮಾಡಿರುವುದಿಲ್ಲ. ದೂರೂ ನೀಡಲು ಸಂಜೆ 7 – 7.30 ಕ್ಕೆ ಹೋಗಿದ್ದೇವು, ಆಗ ಪಿ ಎಸ್ ಐ ಅವರು ಇದ್ದರು. ನಾವು ಪೋಲಿಸರಿಗೆ ದೂರು ನೀಡಿದಾಗ ಸಂಜೆ 7.30 ಆಗಿತ್ತು.

ದೂರು ನೀಡಿದ ನಂತರ ಪೋಲಿಸರು ನನ್ನ ವಿಚಾರಿಸಿರುವುದಿಲ್ಲ ಎಂದು ಸೂಚಿಸುವುದು ಸರಿ.

17. ಆರೋಪಿತರೆಲ್ಲರು ಬೇರೆ ಬೇರೆ ವಾಸ ಇರುತ್ತಿದ್ದರು ಎನ್ನುವುದು ಸರಿ. ಎಲ್ಲಾ ಆರೋಪಿತರು ಊರಿನಲ್ಲಿಯೇ ವಾಸ ಇದ್ದರು. ಆರೋಪಿತರೆಲ್ಲರೂ ನೆಡೆದುಕೊಂಡು ಬಂದಿದ್ದರು. ಆರೋಪಿತರು ಯಾರು ನಮ್ಮ ಅಂಗಡಿ ಹತ್ತಿರ ಬಂದಿರಲಿಲ್ಲ, ಅಂಗಡಿ ಶೇಟರನ್ನು ಬಡೆದಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಚೆನ್ನಪ್ಪ ಶೇಟರನ್ನು ತೆಗೆದ ಕೂಡಲೇ ಆರೋಪಿತರೆಲ್ಲರೂ ಪ್ರಭಾಕರನಿಗೆ, ನನಗೆ ಮತ್ತು ಚನ್ನಪ್ಪನಿಗೆ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

18. ಸರಕಾರದಿಂದ ನಾವು ಪರಿಹಾರ ಹಣ ಪಡೆದುಕೊಂಡಿರುವುದಿಲ್ಲ. ಸರಕಾರದಿಂದ ಪರಿಹಾರ ಹಣ ಬರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಪ್ರಕರಣ ದಾಖಲಾದ ನಂತರ ಇಂತಹ ಇಲಾಖೆಯಲ್ಲಿ ಪರಿಹಾರ ಬರುತ್ತದೆ ಎಂದು ಪೋಲಿಸರು ನನಗೆ ಹೇಳಿರುವುದಿಲ್ಲ. ನಾವು ಸರಕಾರದಿಂದ ಪರಿಹಾರ ಹಣ ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾ–6 ಫಿರೋಜ ಅವರಿಗೂ ಆರೋಪಿತರಿಗೂ ಮೊದಲಿನಿಂದಲೂ ಆಗುತ್ತಿರಲಿಲ್ಲ ಎನ್ನುವುದು ನನಗೆ ಗೊತ್ತಿರಲಿಲ್ಲ. ಚೌಗಲಾ ಅವರು ಪೋಲಿಸ ಠಾಣೆಗೆ ಬರಲು ಹೇಳಿದ್ದರಿಂದ ನಾನು ಹೋಗಿದ್ದೇನೆ ಎನ್ನುವುದು ಸರಿಯಲ್ಲ. ಚೌಗಲಾ ಅವರ ಪ್ರಕಾರ ನಾನು ದೂರು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ನಾನು ವೈಯಕ್ತಿಕವಾಗಿ ದೂರು ಕೊಟ್ಟಿದ್ದೇನೆ.

**ಪಾಟೀ ಸವಾಲುಃ 3 ಮತ್ತು 7 ನೇ ಆರೋಪಿತರ ಪರ ಶ್ರೀ.ಎಸ್.ಸಿ.ಜೆ ರವರ ಪರವಾಗಿ ಎಮ್.ಎಮ್.ಬಿ ವಕೀಲರಿಂದಃ**

19. ಪ್ರಭಾಕರ ಅವರಿಗೆ ಪೊನ ಬಂದಿತ್ತು ಎಂದು ಗೊತ್ತು. ಯಾರಿಂದ ಪೋನ ಬಂದಿತ್ತು ಎಂದು ಹೇಳಲಾಗುವುದಿಲ್ಲ. ನನ್ನ ಅಂಗಡಿ ಪಕ್ಕದಲ್ಲಿ ಒಂದು ಮನೆ ಇದೆ

ಇನ್ನೊಂದು ಪಕ್ಕದಲ್ಲಿ ಕಾಂಪ್ಲೆಕ್ಸ ಇದೆ. ಅವರುಗಳು ಈ ಪ್ರಕರಣದಲ್ಲಿ ಸಾಕ್ಷಿ ಇಲ್ಲ ಎನ್ನುವುದು ಸರಿ. ನಾನು ಖಾಸಗಿ ಆಸ್ಪತ್ರೆಯಲ್ಲಿ ತೋರಿಸಿಕೊಂಡಿದ್ದೇನು ಆ ವಿಚಾರವನ್ನು ನಾನು ಪೋಲಿಸರಿಗೆ ಹೇಳಿರಲಿಲ್ಲ, ಪುನಃ ಪೋಲಿಸರು ಸರಕಾರಿ ಆಸ್ಪತ್ರೆಗೆ ಕಳುಹಿಸಿದ್ದರು. ಸರಕಾರದಿಂದ ಪರಿಹಾರ ಪಡೆಯುವ ಸಲುವಾಗಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಲಾಗಿದೆ ಎನ್ನುವುದು ಸರಿಯಲ್ಲ.

ಉಳಿದಂತೆ, ಶ್ರೀ.ಆರ್.ಸಿ.ಪಿ. ವಕೀಲರು ಮತ್ತು ಯು.ಜಿ.ಬಿ ವಕೀಲರು ಮಾಡಿರುವ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲೆಂದು ಅಳವಡಿಸಿಕೊಂಡಿದ್ದಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.